ಇದಾದಮೇಲೆ ತಾವು ಬನ್ನಿ. ನಮ್ಮ ಅಧಿಕಾರಿಗಳಿದ್ದಾರೆ. ಅವರ ಜೊತೆಯಲ್ಲಿ ಮಾತನಾಡಿ ತಮಗೆ ಸಮಜಾಯಿಷಿಯನ್ನು ನಾನು ಕೊಡುತ್ತೇನೆ. ಏಕೆಂದರೆ ಎಲ್ಲಾ ಕಾಲವನ್ನು ಉಪಪ್ರಶ್ನೆಗೆ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಇನ್ನು ಬೇರೆ ಮಾನ್ಯ ಸದಸ್ಯರುಗಳು ಕೊಟ್ಟಿರುವ ಪ್ರಶ್ನೆಗಳು ದಯವಿಟ್ಟು ತಾವು ಸಹಕಾರವನ್ನು ಮಾಡಬೇಕು. ತಾವು ಹೊರಗಡೆ ಬನ್ನಿ. ಹೇಳುತ್ತೇನೆ.

ಪವರ್ ಟಿಲ್ಲರ್ ಖರೀದಿಗೆ ಸಬ್ಸಿಡಿ ಹಣ

98(844) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಸಾಲಿನಲ್ಲಿ ರೈತರು ಪವರ್ ಟಿಲ್ಲರ್ ಖರೀದಿಸುವುದಕ್ಕಾಗಿ ಸರ್ಕಾರ ನಿಗಧಿಪಡಿಸಿದ ಸಹಾಯಧನ ಎಷ್ಟು;

ಆ) ಈ ಹಣದಲ್ಲಿ ರಾಜ್ಯ ಮತ್ತು ಕೇಂದ್ರದ ಸರ್ಕಾರದ ಪಾಲು ಎಷ್ಟು?

ಇ) ಈ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಹಣ ಎಷ್ಟು?

ಈ) ಎಷ್ಟು ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಕಳೆದ ಸಾಲಿನಲ್ಲಿ ರೈತರು ಪವರ್ ಟಿಲ್ಲರ್ ಖರೀದಿಸುವುದಕ್ಕಾಗಿ ರೂ. 349.82ಲಕ್ಷಗಳಷ್ಟು ಸಹಾಯಧನ ನಿಗಧಿಪಡಿಸಲಾಗಿತ್ತು.

ಆ) ರೂ. 349.82 ಲಕ್ಷಗಳ ಸಹಾಯಧನದಲ್ಲಿ ರಾಜ್ಯದ ಪಾಲು ರೂ. 172.95 ಮತ್ತು ಕೇಂದ್ರದ ಸರ್ಕಾರದ ಪಾಲು ರೂ. 176.87 ಲಕ್ಷ ಆಗಿತ್ತು.

ಇ) ಈ ಸಾಲಿನಲ್ಲಿ ರೂ. 250.00 ಲಕ್ಷಗಳಷ್ಟು ಅನುದಾನವನ್ನು ಈ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ.

ಈ) ಒಟ್ಟು 467 ಫಲಾನುಭಿಗಳಿಗೆ ಈ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ಈ ರಾಜ್ಯದ ರೈತರು ಕೊಳ್ಳುತ್ತಿರುವ ಪವರ್ ಟಿಲ್ಲರ್ ಮೇಲೆ ಸರ್ಕಾರ ಕೊಡುತ್ತಿರುವ ಸಬ್ಸಿಡಿ ಪರವಾಗಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ ಸಾರಿ ಇವರು ಪವರ್ ಟಿಲ್ಲರ್‌ಗೋಸ್ಕರ 349.82 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರು. ಆದರೆ ಈ ಸಾರಿ 250 ಲಕ್ಷ ರೂಪಾಯಿಗಳನ್ನು ಮಾತ್ರ ನಿಗದಿ ಮಾಡಿದ್ದಾರೆ. ನನ್ನ ವಿನಂತಿ ಇಷ್ಟೇನೆ. ಕಳೆದ ಸಾಲಿನಲ್ಲಿ ಒಂದು ಟಿಲ್ಲರ್‌ಗೆ ಎಷ್ಟು ಸಹಾಯಧನವನ್ನು ಕೊಡುತ್ತಿದ್ದೀರಿ? ಈ ಸಾಲಿನಲ್ಲಿ ಒಂದು ಟಿಲ್ಲರ್‌ಗೆ ಎಷ್ಟು ಸಹಾಯಧನ ಎಂದು ಹೇಳಿ ಈಗಾಗಲೇ ನಿಗದಿ ಮಾಡಿದ್ದೀರಿ? ಈ ಸಾರಿ ಸಹಾಯಧನವನ್ನು ಹೆಚ್ಚಿಗೆ ಮಾಡಿದ್ದೀರಾ ಅಥವಾ ಕಡಿಮೆ ಮಾಡಿದ್ದೀರಾ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಸಹಾಯಧನವನ್ನು ಅರ್ಧ ಭಾಗ ಕೇಂದ್ರ ಸರ್ಕಾರ, ಅರ್ಧ ಭಾಗವನ್ನು ರಾಜ್ಯ ಸರ್ಕಾರ ಕೊಡುತ್ತದೆ. ಅದರಲ್ಲಿ 42 ಸಾವಿರ ರೂಪಾಯಿಗಳನ್ನು ಎರಡೂ ಸರ್ಕರಗಳು ಸೇರಿ ಕೊಡುತ್ತಿವೆ.50 ಪರ್‌ಸೆಂಟ್ ಸಬ್ಸಿಡಿಯನ್ನು ಮಾತ್ರ ಪವರ್ ಟಿಲ್ಲರ್‌ಗೆ ಕೊಡುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ನಾನು ಕೇಳಿದ್ದು ಒಂದು ಪವರ್ ಟಿಲ್ಲರ್‌ನ ಸಹಾಯಧನ ಎಷ್ಟಿತ್ತು? ಈ ಸಾರಿ ಎಷ್ಟಿದೆ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, 42 ಸಾವಿರ ಎಂದು ಹೇಳಿದೆ. ಈ ಸಾರಿಯೂ ಅಷ್ಟೇ ಇದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ಮಲೆನಾಡಿನ ರೈತರು. ನಮ್ಮಲ್ಲಿ ದೊಡ್ಡ ದೊಡ್ಡ ಟ್ರಾಕ್ಟರ್‌ಗಳು ನಡೆಯುವುದಿಲ್ಲ. ನಾವು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೇ ಅದು. ನಾವು ನೇಗಿಲು ಬಿಟ್ಟರೆ ಪವರ್ ಟಿಲ್ಲರ್ ಮೇಲೆ ಅವಲಂಬಿತರಾಗಿರುವವರು. ನಮ್ಮ ತಾಲ್ಲೂಕುಗಳಿಗೆ ಹೆಚ್ಚಿನ ಸಹಾಯಧನವನ್ನು ಇದರಲ್ಲಿ ಒದಗಿಸುವುದು ಅವಶ್ಯಕತೆ ಇದೆ. ಬಯಲುಸೀಮೆ ರೈತರಿಗೆ ಟ್ರಾಕ್ಟರ್‌ಗಳನ್ನು. ಕೊಳ್ಳುವುದಕ್ಕೆ ಸಬ್ಸಿಡಿಯನ್ನು ಕೊಡಬಹುದು. ದಯಮಾಡಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ, ಕಳೆದ ವರ್ಷ 349.82 ಲಕ್ಷ ರೂಪಾಯಿಗಳು, ಆಗಲೇ ತುಂಬಾ ಡಿಮ್ಯಾಂಡ್ ಇತ್ತು ತುಂಬಾ ಕಡಿಮೆಯಾಗಿದೆ. ನೀವು ರೈತರ ಪರವಾಗಿರುವ ಸರ್ಕಾರ ಎಂದು ಹೇಳುವ ಜನ ನೀವು ಈ ಸಾರಿ ಕಡಿಮೆ ಮಾಡಿದ್ದೀರಿ ಹೇಗೆ? 250 ಲಕ್ಷ ರೂಪಾಯಿಗಳನ್ನು ಮಾತ್ರ ವಿಸಲಾಗಿಟ್ಟಿದ್ದೀರಿ. ಈ ರೀತಿಯಾದರೆ ಎಲ್ಲಾ ರೈತರು ಪವರ್ ಟಿಲ್ಲರ್‌ಗಳನ್ನು ಕೊಂಡುಕೊಳ್ಳುವುದಕ್ಕಾಗುತ್ತದೆಯೇ? ದಯವಿಟ್ಟು ಯಾವುದಾದರೂ ರೀತಿ ಇದನ್ನು ಪುನರ್ ಪರಿಶೀಲನೆಯನ್ನು ಮಾಡಿ. ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹತ್ತು ಕೋಟಿ ರೂಪಾಯಿಗಳನ್ನಾದರೂ ಇಡಿ. ಇನ್ನೇನು ಮಾಡುವುದಕ್ಕಾಗುವುದಿಲ್ಲ. ಇದೊಂದನ್ನೇ ಮಾಡಿ ನೇರವಾಗಿ ಅವರಿಗೆ ಕೊಡುವಂಥದ್ದು. ದಯಮಾಡಿ ತಾವು ಈ ಇಲಾಖೆಯನ್ನು ವಹಿಸಿಕೊಂಡಿದ್ದೀರಿ, ಈ ಸಂದರ್ಭದಲ್ಲಿ ಸಹಾನುಭೂತಿಯಿಂದ ರೈತರ ಪರವಾಗಿ ಇಂಥ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ವಿನಂತಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಅರಗ ಜ್ಞಾನೇಂದ್ರರವರು ಕೇಳುತ್ತಿರುವುದು ನಿಜ. ಹಣದ ಲಭ್ಯತೆಗಳನ್ನು ನೋಡಿಕೊಂಡು ಆಯವ್ಯಯದಲ್ಲಿ ಇಟ್ಟಿದ್ದಾರೆ. ಈಗ 250 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅವರು ಹೇಳುವ ಪ್ರಕಾರ ನಾನು ಈಗಲೂ ಕೂಡ ನಮ್ಮ ಆರ್ಥಿಕ ಮಂತ್ರಿಗಳನ್ನು ಕೇಳುತ್ತಿದ್ದೇನೆ, ನಾನು ಕನಿಷ್ಟ ಹತ್ತು ಪವರ್ ಟಿಲ್ಲರ್‌ಗಳನ್ನಾದರೂ ಒಂದೊಂದು ಕ್ಷೇತ್ರಕ್ಕೆ ಕೊಡಬೇಕಾಗುತ್ತದೆ ಎಂದು ನಿಮ್ಮ ಹಾಗೆ ಪವರ್ ಟಿಲ್ಲರ್‌ನ್ನು ನಾನೂ ಕೂಡ ಇಟ್ಟುಕೊಂಡಿರುವ ಮನುಷ್ಯ. ಆದರೆ ಆರ್ಥಿಕ ಲಭ್ಯತೆಗಳನ್ನು ನೋಡಿಕೊಂಡು ನಾವು ಇತಿಮಿತಿಗಳಲ್ಲಿ ಹೋಗಬೇಕಾಗುತ್ತದೆ. ಆ ಹಂತದಲ್ಲಿ ನಾವು ರೈತರ ಪರ ಇರುವ ಸರ್ಕಾರ, ಅದಕ್ಕೆ ಹೆಚ್ಚಿನ ಚಿಂತನೆಯನ್ನು ಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಹೋದಸಾರಿಗಿಂತ ಕಡಿಮೆ ಮಾಡಿಬಿಟ್ಟು ನೀವು ರೈತರ ಪರ ಎಂದು ಹೇಗೆ ಹೇಳುತ್ತೀರಿ? ಹೋದ ಸರ್ಕಾರ ಪರ ಇರಲಿಲ್ಲ. ನೀವು ರೈತರ ಪರ ಇಲ್ಲ ಎಂದು ಹೇಳಿಬಿಟ್ಟು ಅಧಿಕಾರಕ್ಕೆ ಬಂದಿರುವುದು. ನೀವು ಕಡಿಮೆ ಮಾಡಿದ್ದೀರಲ್ಲಾ, ರೈತರ ಪರ ಹೇಗೆ ಆಗುತ್ತೀರಿ? ಹಾಗಾದರೆ ಹೋದ ಸಾರಿಯೇ ಒಳ್ಳೆಯ ಸರ್ಕಾರ ಇತ್ತು ಎಂದಾಗುತ್ತದೆ. ಈಗ ಒಳ್ಳೆಯ ಸರ್ಕಾರ ಇಲ್ಲ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ರೀತಿಯಲ್ಲಿ ನಾನೂ ಕೂಡ ಹತ್ತು ಪವರ್ ಟಿಲ್ಲರ್‌ಗಳನ್ನು ಒಂದು ಕ್ಷೇತ್ರಕ್ಕೆ ಕೊಡಬೇಕು ಎಂದು ಹೇಳಿದೆ. ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ. ನಿಮಗೆ ಬೇಕಾಗಿರುವುದನ್ನು ಮಾತ್ರ ಕೇಳಿಸಿಕೊಳ್ಳುತ್ತೀರಿ. ಬೇಡದೇ ಇರುವುದನ್ನೂ ಕೇಳಿಸಿಕೊಳ್ಳಿ. ಕೊಡಬೇಕು ಎಂದು ಇಚ್ಚೆ ಇರುವವನು ನಾನು. 5 ಟ್ರಾಕ್ಟರ್‌ಗಳನ್ನು ಕೊಡಬೇಕೆಂದು

ಇಚ್ಛೆ ಇರುವವನು ನಾನು. ಆದರೆ ನಮ್ಮ ಆರ್ಥಿಕ ಬಿಕ್ಕಟ್ಟುಗಳನ್ನೂ ನೋಡಬೇಕಾಗುತ್ತದೆ. ಅದರಿಂದ ಕಡಿಮೆಯಾಗಿದೆ. ಅದಕ್ಕೆ ಕನಿಷ್ಟ ಹೋದ ವರ್ಷದ್ದನ್ನು ತೂಗಿಸುವುದಕ್ಕೆ ಏನು ಮಾಡಬೇಕು ಎಂದು ನಾನು ಅದನ್ನು ಪರಿಶೀಲಿಸುವ ಕೆಲಸವನ್ನು ಮಾಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾವು ಕೇಳಿದ ಹಾಗೆ ಮಾನ್ಯ ಸಚಿವರೂ ಕೇಳುತ್ತಿದ್ದಾರೆ. ಅವರು ಧೈರ್ಯವಾಗಿ ಹೇಳಬೇಕು. ಈಗ ಅವರು ಮಂತ್ರಿಯಾಗಿದ್ದಾರೆ. ನಾನು ಕೊಡಿಸುತ್ತೇನೆ, ನೀವೇನೂ ಯೋಚನೆ ಮಾಡಬೇಡಿ. ಇಂಥ ಇಂಥ ಕ್ಷೇತ್ರಕ್ಕೆ ಕಳುಹಿಸಿಕೊಡುತ್ತೇನೆ ಎಂದು ಹೇಳಬೇಕೇ ಹೊರತು ನಾನು ಆರ್ಥಿಕ ಸಚಿವರ ಹತ್ತಿರ ಒತ್ತಾಯ ಮಾಡುತ್ತಿದ್ದೇನೆ, ಅಂದರೆ ನಾವೇನು ಮಾಡುವುದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು. ನೀವು ಧೈರ್ಯವಾಗಿ ಹೇಳಿ.

ಶ್ರೀ ಆರ್. ಅಶೋಕ್ : ನೀವೇ ಅರ್ಜಿ ಹಿಡಿದು ನಿಂತುಕೊಂಡರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಅರ್ಥಸಚಿವರೂ ಮತ್ತು ಕೃಷಿ ಸಚಿವರೂ ಇಬ್ಬರೂ ಒಂದೇ ಪಕ್ಷದಿಂದ ಬಂದವರು. ನಿಮ್ಮ ಹತ್ತಿರ ಎರಡೂ ಪವರ್ಸ್ ಇದೆ. ಕೃಷಿಕರಿಗೆ ಸಹಾಯವನ್ನು ಮಾಡುವುದಕ್ಕೆ.

ಅಧ್ಯಕ್ಷರು : ಅವರಿಗೂ ಅಡೆತಡೆಗಳು ಇವೆ. ಆದ್ದರಿಂದ ಮುಂದೆ ಹೋಗೋಣ.

ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳ ವಿತರಣೆ

99(752) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳನ್ನು ವಿತರಣೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು; ಯಾವ ಯಾವ ತಾಲ್ಲೂಕುಗಳ ರೈತರುಗಳಿಗೆ ಈ ರೀತಿ ಮೋಸ ಮಾಡಲಾಗಿದೆ;

ಇ) ಕಳಪೆ ಬಿತ್ತನೆ ಬೀಜ ಮಾರಾಟ ಮಾಡಿರುವ ಕಂಪನಿಗಳು ಯಾವುವು ಅವುಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಕಳಪೆ ಬಿತ್ತನೆ ಬೀಜ ಉಪಯೋಗಿಸಿರುವುದರಿಂದ ರೈತರುಗಳಿಗೆ ಆಗಿರುವ ನಷ್ಟದ ಪ್ರಮಾಣ ಎಷ್ಟು;

ಉ) ರೈತರುಗಳಿಗೆ ಉಂಟಾಗಿರುವ ನಷ್ಟವನ್ನು ತುಂಬಿಕೊಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ 5 ಪ್ರಕರಣಗಳು ಬಂದಿರುತ್ತವೆ. ಜಿಲ್ಲಾವಾರು/ತಾಲ್ಲೂಕುವಾರು ಹಾಗೂ ಬೆಳೆವಾರು ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಬೆಳೆ
1	ದಾವಣಗೆರೆ	ದಾವಣಗೆರೆ	ಮು.ಜೋಳ
2	ಗದಗ	ಮುಂಡರಗಿ ರೋಣ, ಗದಗ	ಹೆಸರು